ಆ) ಆರ್.ಐ.ಡಿ.ಎಫ್. - 4 ರಡಿ ಕಾಮಗಾರಿಗಳನ್ನು ಗುರುತಿಸಿದ್ದು ಆ ಪ್ರಸ್ತಾವನೆಗೆ ನಬಾರ್ಡ್ ವತಿಯಿಂದ ಅನುದಾನ ದೊರೆತ ನಂತರದ ಸಮಯದಿಂದ 18 ತಿಂಗಳೊಳಗಾಗಿ ಮುಗಿಸ ಬಹುದಾಗಿರುತ್ತದೆ.

ಇ) ಗ್ರಾಮೀಣ ಸಂಪರ್ಕ ಹೊಂದಿರುವಂತಹ, 5 ಕಿ.ಮೀ. ಗಿಂತ ಕಡಿಮೆ ಉದ್ದದ 15 ಲಕ್ಷ ರೂ. ಗಳಿಗೂ ಕಡಿಮೆ ಮೊತ್ತದ ಮತ್ತು ಮರು ಡಾಂಬರೀಕರಣ ಹೊರತುಪಡಿಸಿದ ಮತ್ತು ಕೃಷಿ ಅಭಿವೃದ್ಧಿಗೆ ಸಹಾಯವಾಗುವಂತಹ ಕಾಮಗಾರಿಗಳನ್ನು ಆಯ್ಕೆ ಮಾಡಲಾಗಿದೆ.

ರಾಜ್ಯದಲ್ಲಿ ಒಟ್ಟು ಅತಿಕ್ರಮಣ ಮಾಡಿರುವ ಅರಣ್ಯ ಭೂಮಿ

2333 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಒಟ್ಟು ಅತಿಕ್ರಮಣ ಮಾಡಿರುವ ಅರಣ್ಯ ಭೂಮಿ ವಿಸ್ತೀರ್ಣ ಎಷ್ಟು? ಎಷ್ಟು ಕುಟುಂಬಗಳಿಗೆ ಇದು ಅನ್ವಯವಾಗುತ್ತದೆ?*

ಆ) *ಈ ಭೂಮಿಗಳನ್ನು ಸಕ್ರಮ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?*

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) :

ಅ) ರಾಜ್ಯದಲ್ಲಿ ಅತಿಕ್ರಮಣ ಮಾಡಿರುವ ಅರಣ್ಯ ಭೂಮಿಯ ವಿವರ ಈ ಕೆಳಗಿನಂತಿದೆ :

ಕುಟುಂಬ	*ಒಟ್ಟು ವಿಸ್ತೀರ್ಣ*
1,22,591	1,07,065.100 ಹೆಕ್ಟೇರ್

ಆ) ಕೇಂದ್ರ ಸರ್ಕಾರವು ದಿನಾಂಕ 27.4.78ರ ಪೂರ್ವದ ಅತಿಕ್ರಮಣಗಳ ಪೈಕಿ 19,348 ಪ್ರಕರಣಕ್ಕೆ ಸಂಬಂಧಿಸಿದ 14,848.826 ಹೆಕ್ಟೇರ್ ಅರಣ್ಯ ಭೂಮಿ ಸಕ್ರಮಗೊಳಿಸಲು ಅನುಮೋದನೆ ನೀಡಿದ್ದು, ರಾಜ್ಯ ಸರ್ಕಾರವು ತನ್ನ ಆದೇಶ ಸಂಖ್ಯೆ ಅಪಜೀ 5 ಎಫ್ ಜಿಎಲ್ 90, ದಿನಾಂಕ 5.5.97ರಲ್ಲಿ ಹಲವು ನಿಬಂಧನೆಗಳನ್ನು ವಿಧಿಸಿ ಸಕ್ರಮಗೊಳಿಸಲು ಆದೇಶ ನೀಡಿ ಪಟ್ಟ ನೀಡಿರುವ ಅಧಿಕಾರವನ್ನು ಆಯಾ ಜಿಲ್ಲಾಧಿಕಾರಿಗಳಿಗೆ ನೀಡಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವು ಬಂದರುಗಳನ್ನು ಅಭಿವೃದ್ಧಿ ಪಡಿಸುವುದು.

2334 - ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲಾ) : ಮಾನ್ಯ ಬಂದರು ಮತ್ತು ಮೀನುಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಉತ್ತರ ಕನ್ನಡ ಜಿಲ್ಲೆಯಲ್ಲಿ ಹಲವು ಬಂದರುಗಳನ್ನು ಅಭಿವೃದ್ಧಿ ಪಡಿಸಲು ಉದ್ದೇಶಿಸಿರುವ ಯೋಜನೆಗಳಾವುವು (ವಿವರ ನೀಡುವುದು)?*

ಅ) ಮೀನುಗಾರಿಕಾ ರಸ್ತೆಗಳ ಸುಧಾರಣೆಗೆ ತೆಗೆದುಕೊಂಡ ಕ್ರಮಗಳು ಯಾವುವು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬಂದರು ಮತ್ತು ಮೀನುಗಾರಿಕೆ ಸಚಿವರು) :

ಅ) ಕಾರವಾರ ಬಂದರನ್ನು ಜಂಟಿ ರಂಗದಲ್ಲಿ 85.00 ಕೋಟಿ ರೂ.ಗಳ ಅಂದಾಜಿನಲ್ಲಿ ಅಭಿವೃದ್ಧಿಪಡಿಸಲು ಹಾಗೂ ಬೇಲಿಕೇರಿ ಮತ್ತು ತದಡಿ ಬಂದರುಗಳನ್ನು ಖಾಸಗಿ ಬಂಡವಾಳ ಹೂಡಿಕೆಯಿಂದ ಕೇಂದ್ರ ಸರ್ಕಾರದ ಆರ್ಥಿಕ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿಯ ಉಧಾರೀಕರಣ ನೀತಿಯಲ್ಲಿ ಅಭಿವೃದ್ಧಿಪಡಿಸಲು ಯೋಜನೆಗಳನ್ನು ರೂಪಿಸಲಾಗಿದೆ.

ಆ) ಪ್ರತಿ ವರ್ಷ ಅನುದಾನ ಲಭ್ಯತೆಗನುಗುಣವಾಗಿ ಕರಾವಳಿ ಜಿಲ್ಲೆಗಳ ಮೀನುಗಾರಿಕಾ ರಸ್ತೆಗಳ ಸುಧಾರಣೆಗೆ ಅನುದಾನ ಒದಗಿಸಿ, ಲೋಕೋಪಯೋಗಿ ಇಲಾಖೆಯ ಮೂಲಕ ನಿರ್ಮಿಸಿ ನಿರ್ವಹಿಸಿಕೊಂಡು ಬರಲಾಗುತ್ತಿದೆ. ಇದಲ್ಲದೆ ನಬಾರ್ಡ್ ಸಾಲ ಸಹಾಯದ ಆರ್ ಐಡಿಎಫ್-3ರಲ್ಲಿ 4 ಮೀನುಗಾರಿಕಾ ರಸ್ತೆಗಳು ಮತ್ತು 1 ಸೇತುವೆ ಕಾಮಗಾರಿ ಮಂಜೂರಾಗಿದೆ. ಅಲ್ಲದೆ ಸರ್ಕಾರವು ಕಳೆದ 3 ವರ್ಷಗಳಲ್ಲಿ ಮೀನುಗಾರಿಕಾ ರಸ್ತೆಗಳಿಗೆ ಈ ಕೆಳಗಿನಂತೆ ಖರ್ಚು ಮಾಡಿದೆ.

ಜಿಲ್ಲೆ	*1995-96*	*1996-97*	*1997-98 (ಲಕ್ಷಗಳಲ್ಲಿ)*
ದಕ್ಷಿಣ ಕನ್ನಡ	22.56	23.93	12.41
ಉತ್ತರ ಕನ್ನಡ	9.40	28.07	12.30

ಹಾಗೂ ಪ್ರಸ್ತುತ ಸಾಲಿಗೆ ದಕ್ಷಿಣ ಕನ್ನಡದ ಜಿಲ್ಲೆಗೆ 12.00 ಲಕ್ಷ ರೂ.ಗಳು ಉತ್ತರ ಕನ್ನಡ ಜಿಲ್ಲೆಗೆ 8.00 ಲಕ್ಷ ರೂ.ಗಳನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ.

ರಾಜ್ಯದಲ್ಲಿ ಜಾನುವಾರು ಜನಗಣತಿ ಮತ್ತು ಆಸ್ಪತ್ರೆಗಳು

2336 - **ಶ್ರೀ ಕೆ. ವಿರೂಪಾಕ್ಷಪ್ಪ (ಸಿಂಧನೂರು) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?**

ಅ) ಜಾನುವಾರು ಜನಗಣತಿಯನ್ನು ಎಷ್ಟು ವರ್ಷಕ್ಕೊಮ್ಮೆ ಕೈಗೊಳ್ಳಲಾಗುವುದು. ಕಳೆದ ಜನಗಣತಿ ಯಾವ ವರ್ಷದಲ್ಲಿ ಮುಗಿಸಲಾಗಿದೆ. ಅದರನ್ವಯ ಪ್ರತಿ ಪ್ರಾಣಿ ವರ್ಗಗಳ ಸಂಖ್ಯೆ ಎಷ್ಟಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಎಷ್ಟು ಜಾನುವಾರುಗಳಿಗೆ ಒಂದು ಆಸ್ಪತ್ರೆ ಇರಬೇಕೆಂದು ಸರ್ಕಾರಿ ನಿಗಧಿಪಡಿಸಿದೆ; ಅದರಂತೆ ಆಸ್ಪತ್ರೆಗಳನ್ನು ಪ್ರಾರಂಭಿಸಲಾಗಿದೆಯೇ? ಹಾಗಿಲ್ಲದಿದ್ದಲ್ಲಿ ಕಾರಣಗಳೇನು?

ಇ) ರಾಜ್ಯದಲ್ಲಿ ಯಾವ ಯಾವ ಪ್ರಾಣಿಯ ಜಾನುವಾರು (ಪಶು) ಆಸ್ಪತ್ರೆಗಳಿಗೆ ಅವು ಎಲ್ಲೆಲ್ಲಿ ಇವೆ? ಪ್ರತಿಯೊಂದು ಆಸ್ಪತ್ರೆಗೆ ಉಚಿತವಾಗಿ ಔಷಧಕ್ಕಾಗಿ ಎಷ್ಟು ಹಣವನ್ನು ಸರ್ಕಾರ ಬಿಡುಗಡೆ ಮಾಡುತ್ತಲಿದೆ, ಈ ರೀತಿ ಬಿಡುಗಡೆ ಮಾಡುತ್ತಿರುವ ಹಣದ ಮೊತ್ತವನ್ನು ಹೆಚ್ಚಿಸಲು ಸರ್ಕಾರ ಯೋಚಿಸಿದೆಯೇ?